Registered No. M. 1393

ಕಂಠೀರವ
KANTEERAVA

KANARESE, BI-WEEKLY

ESTD. 1919 ಸ್ಥಾಪನೆ.

ಸಂಪುಟ ೨೩ | ಮಂಗಳೂರು, ೧೯೪೨ನೇ ಇಸವಿ ಮಾರ್ಚಿ ತಾರೀಕು ೧೩ನೇ ಶುಕ್ರವಾರ | ಸಂ.
VOL. XXIII | MANGALORE, FRIDAY, MARCH 13, 1942 | NO.

ಆಸ್ಟ್ರೇಲಿಯಕ್ಕೆ ಗಂಡಾಂತರ

ಮೇಜರ್ ಜನರಲ್ ಗೋರ್ಡನ್ ಬೆನ್ನೆಟರವರು ಆಸ್ಟ್ರೇಲಿಯದಿಂದ ಒಂದು ಬ್ರಾಡ್‌ಕಾಸ್ಟ್ ಭಾಷಣ ಮಾಡುತ್ತ, ಜಪಾನರು ತಮ್ಮ ಬಲಸಹಿತವಾಗಿ ಆಸ್ಟ್ರೇಲಿಯವನ್ನು ಆಕ್ರಮಿಸುವ ಕುರಿತಾಗಿ ಪ್ರಸ್ತಾವಿಸಿದರು. ಉತ್ತರ ಕರಾವಳಿಯ ಅತ್ಯಂತ ದುರ್ಬಲಸ್ಥಾನದಲ್ಲಿ ಅವರು ಆ ಆಕ್ರಮಣದ ಆರಂಭವನ್ನು ಮಾಡ ಬಹುದೆಂದರು.

"ಜಪಾನರು ಬ್ರೂಮ್ ವೈಂಡ್ ಹ್ಯಾಮ್, ಡಾರ್ವಿನ್ ಮತ್ತು ಉತ್ತರ ಕ್ವೀನ್ಸ್‌ಲ್ಯಾಂಡಿನಲ್ಲಿರುವ ವಿಮಾನನಿಲ್ದಾಣಗಳನ್ನು ಹಿಡಿಯಲು ನೋಡಬಹುದು. ಬಳಿಕ ಆ ನಿಲ್ದಾಣಗಳ ಮೂಲಕ ಒಳ ದೇಶಕ್ಕೆ ನುಗ್ಗಲೆತ್ನಿಸಬಹುದು. ಆಸ್ಟ್ರೇಲಿಯದಲ್ಲಿ ಅವರು ಕಾಲೂರದಂತೆ ನಾವು ಅವರನ್ನು ತಡೆಯಬೇಕು. ಉತ್ತರದ ನಿಲ್ದಾಣಗಳಿಂದ ಜಪಾನರು ತಮ್ಮ ನಗರ ಗಳ ಮೇಲೆ ಬಾಂಬು ಎಸೆಯದಂತೆ ನಾವು ನೋಡಿಕೊಳ್ಳಬೇಕು" ಎಂದರು.

"ಮಲಯ—ಸಿಂಗಪುರಗಳ ವಿಚಾರ ಗಳಲ್ಲೇ ಕಾಲಹರಣ ಮಾಡಲು, ಚಿಂತಿ ಸುತ್ತ ಕುಳ್ಳಿರಲು ಮಿತ್ರರಿಗೆ ಇನ್ನು ಹೊತ್ತಿಲ್ಲ. ಅವರು ಆ ಅಪಜಯ ಗಳಿಂದ ಬುದ್ಧಿ ಕಲಿಯಬೇಕು. "ಹಾಗಾ ದೀತು, ಹೀಗಾದೀತು" ಎಂದು ಊಹಿ ಸಿದುದೇ ಮಲಯದ ಅಪಜಯಕ್ಕೆ ಮುಖ್ಯ ಕಾರಣ. ಮೊದಲು ಕೆಲವು ಜವಾಬುದಾರಿಯಂತ ಕ್ಷೇತ್ರಗಳಲ್ಲಿ, ಜಪಾನರು ಮಲೆಯದ ಮೇಲೆ ದಾಳಿ ಮಾಡುವ ಇಚ್ಛೆಯುಳ್ಳವರಾಗಿಲ್ಲವೆಂದು ಭಾವಿಸಲಾಗಿತ್ತು. ಮಲಯದಲ್ಲಿ ಅರ್ಧ ಮನಸ್ಸಿನ ರಕ್ಷಣಾಕಾರ್ಯಗಳನ್ನು ಕೈಕೊಳ್ಳಲು ಇದೂ ಒಂದು ಕಾರಣ ವಾಗಿತ್ತು. ಜಪಾನರು ಕೆಲವೊಂದು ಅನುಕೂಲ ಸ್ಥಳಗಳನ್ನು ಆಕ್ರಮಿಸು ವರೆಂದು ತಿಳಿದ ಬಂದ ಕೂಡಲೇ, ಕೆಲ ವರು ಸಿಂಗಪುರವನ್ನು ಸಮುದ್ರದ ದಾಳಿ ಯಿಂದ ರಕ್ಷಿಸಲು ನೋಡಿದರು. ಇಷ್ಟೇ ಅಲ್ಲದೆ, ಜಪಾನರಲ್ಲಿ ಸಾಕಷ್ಟು ವಿಮಾನ ಗಳು ಇಲ್ಲವೆಂದು ಭಾವಿಸಿದ್ದುದೂ ಸರಿ ಯಲ್ಲವೆಂದಾಯಿತು."

"ಆಸ್ಟ್ರೇಲಿಯಾ ಅದೇ ತಪ್ಪು ಮಾಡ ಬಾರದು; ಮಲಯದಲ್ಲಿ ನಡೆದುದೇ ಇಲ್ಲಿಯೂ ನಡೆಯದಂತೆ ನೋಡಿಕೊಳ್ಳ ಬೇಕು. ಇಂಪೀರಿಯಲ್ ಸೇನೆಗಳು, ಶತ್ರುಗಳು ಅವರ ಮೇಲೆ ಬಿದ್ದ ಪ್ರತಿ ಸಲವೂ ಅವರನ್ನು ಸೋಲಿಸಿ ಓಡಿಸಿ ದುವು: ಜಪಾನರು, ತಮ್ಮ ರಕ್ಷಣೆಗಾಗಿ ಕಾದಾಡುವಂತೆ ಮಾಡಿದಾಗಲೆಲ್ಲ, ಜಪಾ ನರು ಹಿಂದೆ ಸರಿದರು. ಎಮ್ಮರಿಗೆ ಕಾದಾಡುವ ಬಲಗಳೊಡನೆ ಮಾತ್ರ ಮುರುದಾಳಿ ಹೂಡುವ ಸ್ಫೂರ್ತಿ ಇದ್ದರೆ ಸಾಲದು; ಯಾವತ್ತು ಜನರ ಮಧ್ಯ ದಲ್ಲಿಯೂ ಆ ಸ್ಫೂರ್ತಿ ಹರಡುವಂತಾಗ ಬೇಕು. ಅದರಿಂದ ಅನಂತ ಲಾಭವಿದೆ. ಮಲಯದಲ್ಲಿ ಜಪಾನರಿಗೆ ಅನುಕೂಲ ವಾಗಿ ಹಲವು ಅರಣ್ಯಗಳಿದ್ದುವು; ಅದ ರಿಂದ ಅವರ ಪಾಳಿ ಸುಗಮವಾಯಿತು. ಆದರೆ ಅಂಥ ಅರಣ್ಯಗಳು ಆಸ್ಟ್ರೇಲಿಯ ದಲ್ಲಿ ಬಹಳ ಕಡಿಮೆ! ಆಸ್ಟ್ರೇಲಿಯದಲ್ಲಿ ಶತ್ರುಗಳು ಯಾರು, ಮಿತ್ರರು ಯಾರು ಎಂದುತಿಳಿದುಕೊಳ್ಳಲುಪ್ರಯಾಸವೇನೂ ಇಲ್ಲ. ಜಪಾನೀಯರು ಇಲ್ಲಿ ಹಳ್ಳಿಗಳಲ್ಲಿ ಸುಲಿಗೆ ಮಾಡಿದ ಅಕ್ಕಿಯನ್ನು ತಿಂದೇ ಬದುಕಲಾರರು; ನೀರಿನ ಸರಬರಾಯಿಯ ಪ್ರಶ್ನೆಯಾದರೂ ಜಪಾನರಿಗೆ ಕಠಿನ ವಾದುದೇ, ಮತ್ತೆ ಆಸ್ಟ್ರೇಲಿಯವು ತನ್ನ ಶತ್ರುಗಳಿಗಿಂತ ಉತ್ತಮವಾದ ವಿಮಾನ ಗಳೇ ತನ್ನ ಸಹಾಯಕ್ಕೆ ಬದಗುವಂತೆ ಒತ್ತಾಯಪಡಿಸಬೇಕಾಗಿದೆ" ಎಂದರು.

ಜಾವಾದಲ್ಲಿ ಜಪಾನರ ಹಕ್ಕುಸ್ಥಾಪನೆ.

ಜಾವಾದಲ್ಲಿನ ಡಚ್ಚರು ಶರಣಾ ಗತರಾದರೆಂಬ ವಾರ್ತೆಯು ಲಂಡನಿನಲ್ಲಿ ಇಷ್ಟರಲ್ಲೇ ಧೃಡಪಟ್ಟಲ್ಲವಾದರೂ, ಕೆಲವು ದಿನಗಳಿಂದ ಅಲ್ಲಿನ ವಿದ್ಯಮಾನ ಗಳು ದಾರುಣವಾಗಿವೆ ಎಂಬುದು ನಿಜ ವಾಗಿದೆ. ಜಪಾನರು ಈ ವಾರ್ತೆ ಯನ್ನು ಹರಡಿದ ಬಳಿಕ, ಜಾವಾದಲ್ಲಿ ಕಾದುತ್ತಿರುವ ಬ್ರಿಟಿಷ್ ಯುದ್ಧ ಕಾರ್ಯಾಲಯದಿಂದ ಯಾವ ವಾರ್ತೆ ಯೂ ಈ ಕುರಿತು ಬಂದಿಲ್ಲ.

ಗುಂಡು ಹಾರಿಸುವುದನ್ನು ನಿಲ್ಲಿಸ ಬೇಕೆಂದು ಡಚ್ಚರು ಜಪಾನರನ್ನು ಕೇಳಿಕೊಂಡರು ಎಂಬ ಜಪಾನರ ಸುದ್ದಿ ಯನ್ನು ಡಚ್ಚರು ಸಂಪೂರ್ಣವಾಗಿ ಅಲ್ಲ ಗೆಳೆಯುತ್ತಾರೆ. ಡಚ್ಚರು ತಾತ್ಕಾಲಿಕ ಶಾಂತಿಗಾಗಿಯೂ ಜಪಾನರೊಡನೆ ಅಪೇ ಕ್ಷಿಸಿದರೆಂಬುದೂ ನಿಜವಲ್ಲವಂತೆ. ಯುದ್ಧವು ಬೆಂಡೊಯಿನ್ ಮತ್ತು ಸುರ ಬಯದ ಸುತ್ತಲೂ ನಡೆಯುತ್ತಿದೆ ಎಂದು ಕಳೆದ ತಾ. ೮ರ ವಾರ್ತೆ.

ಪೆಗುವಿನ ಬಳಿ ಕಾದಾಟ.

ಪೆಗುವಿನ ಸಮೀಪದ ಎರಡು ಹಳ್ಳಿ ಗಳನ್ನು ಜಪಾನರು ಆಕ್ರಮಿಸಿರುವರು; ಮುಂದೆ ಜಪಾನಿಗಳು ರಂಗೂನ್—ಪ್ರೋಮ್ ರಸ್ತೆಯನ್ನು ಕತ್ತರಿಸಬಹು ದೆಂದು ಅಂದಾಜು. ಒಂದು ವೇಳೆ ಜಪಾನರು ಪೆಗು, ರಂಗೂನುಗಳಲ್ಲಿರುವ ಬ್ರಿಟಿಶ್ ಸೇನೆಗಳನ್ನು ಸುತ್ತುಕಟ್ಟಲೂ ನೋಡಬಹುದು. ಅಧಿಕಾರಿಗಳೂ ಜನರೂ ಅಧೀರರಾಗಿರದೆ ಕರ್ತವ್ಯ ತತ್ಪರರಾಗಿರಬೇಕೆಂದು ಬರ್ಮಾ ಗವರ್ನರರ ಎನಂತಿ.

ಈ ಹೆಸರಿದೆಯೇನೋ ನೋಡಿ

ಇವು ಮೂರನ್ನೂ ಒಟ್ಟಿಗೆ ಉಪಯೋಗಿಸಿದಲ್ಲಿ ಹೆಚ್ಚುಕಾಲ-ಹೆಚ್ಚು ಪ್ರಕಾಶಮಾನವಾದ ಬೆಳಕು ಸಿಗುವುದು



ಗುಣಮಾಡಲು ಅಸಾಧ್ಯವೆಂದು ತಿಳಿಯಲ್ಪಟ್ಟ ಕಲಿಜ ಮತ್ತು ಗುಲ್ಮ ರೋಗಗಳಿಂದ ಈ ಅಪೂರ್ವವಾದ ಔಷಧಿಯು ಸಾವಿರಾರು ಮಕ್ಕಳನ್ನು ಬದುಕಿಸಿರುತ್ತದೆ.

ಜಮ್ಮಿಯವರ
ಶಿವರ ತೈಲ

ಇದನ್ನು ಹಲವು ಮಂದಿ ಸುಪ್ರಸಿದ್ಧ ಡಾಕ್ಟರುಳು ಅತ್ಯುತ್ಕೃಷ್ಟವಾದ ವೈದ್ಯಕೀಯ ವಿಷಯವೆಂದು ಕೊಂಡಾಡುತ್ತಿರುವರು.
ಎಲ್ಲಾ ಕೆಮಿಸ್ಟರಲ್ಲಿ ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.
ಜಮ್ಮಿ ವೆಂಕಟರಮಣಯ್ಯ ಎಂಡ್ ಸನ್ಸ್
1/1 ಬ್ರಾಡೀಸ್ ರೋಡ್, ವೈಲಾಪುರ, ಮದ್ರಾಸು ಅಲ್ಲದೆ, ಮುಂಬಯಿ, ಕಲ್ಕತ್ತಾ, ಲಕ್ನೋ, ಬೆಂಗಳೂರು ಮತ್ತು ತಿರುಚಿನಾಪಳ್ಳಿ.

Announcement

We have great pleasure in announcing an all round reduction in rates of interest on advances.

Our present rates are:

Personal Loans & Overdrafts	....	7½% p. a.
Usance Bills	....	7 % p. a.
Trade Bills	....	6 % p. a
Loans on Produce	....	5½% p. a.
Loans on Insurance Policies Stocks & Shares		5 % p. a
Loans on Gold	....	4½% p. a.

The above rates are for medium-sized loans. The rates for small loans will however be slightly higher since the cost of time, labour and stationery consumed in such cases is proportionately higher.

CANARA BANK, LIMITED.
ESTD: 1906.

XXIII] ಮಂಗಳೂರು, ತಾರೀಕು ೧೩--೩--೧೯೪೨ [೪೯
೧೮೬೩ ವೃಷ ಸಂವತ್ಸರದ ಫಾಲ್ಗುಣ ಬ| ೧೧ ಶುಕ್ರವಾರ

ರಂಗೂನ್—ಜಾವಾ!

ರಂಗೂನಿನಿಂದ ಒಕ್ಕಲು ತೆಗೆದುದಾಯಿತು; ಜಾವಾದಲ್ಲಿ ವ್ಯವಸ್ಥೆಯೊಡನೆ ನಡೆಯುತ್ತಿದ್ದ ಆ ಹೋರಾಟವು ಅಂತ್ಯವಾಯಿತು. ಇವೆರಡೂ ಮಿತ್ರರಾಷ್ಟ್ರಗಳಿಗೆ ದೊಡ್ಡ ಪೆಟ್ಟೆಂದು ಬೇರೆ ಹೇಳಬೇಕಾಗಿಲ್ಲ.

ಈಚಿಗೆ ಕೆಲ ದಿನಗಳಿಂದ ರಂಗೂನಿನ ಕಡೆಯಿಂದ ಬಂದ ವಾರ್ತೆಗಳೆಂದರೆ—ಕೇವಲ ಅಲ್ಪಸ್ವಲ್ಪ. ಇದರಿಂದ ಜಪಾನರು ರಂಗೂನಿನ ಅತ್ತ ಸಾಗುವುದನ್ನು ಬಿಟ್ಟು, ತಮ್ಮ ಮುಖ್ಯೋದ್ದೇಶವಾದ ಬರ್ಮಾ ರಸ್ತೆಯನ್ನು ಕತ್ತರಿಸುವಲ್ಲಿಯೇ ವ್ಯಸ್ತರಾಗುವರೋ ಎಂಬ ಸಂದೇಹಕ್ಕೆ ಅವಕಾಶವಿದ್ದಿತು. ಆದರೆ ಅದು ಹಾಗಾಗದೆ, ರಂಗೂನಿನಿಂದ ಬ್ರಿಟಿಷ್ ಬಲಗಳು ಹಿಂದೆಗೆದಿವೆ ಎಂಬ ವಾರ್ತೆ ಈಗ ಬಂದಿದೆ.

ಈಗ ಕೆಲವು ಕಾಲದಿಂದ ರಂಗೂನ್ ಬಂದರವನ್ನು ಉಪಯೋಗಿಸಿಕೊಳ್ಳದೆಯೂ, ಅಲ್ಲಿಂದ ಹಿಂದೆ ಸರಿಯುವ ಮುನ್ನ ಧ್ವಂಸಕಾರ್ಯವನ್ನು ಪೂರೈಸಿಯೂ ಇದ್ದರೂ ರಂಗೂನಿನ ಮೇಲಿನ ಹಿಡಿತ ತಪ್ಪಿತೆಂಬುದು ಮಿತ್ರರಿಗೊಂದು ದೊಡ್ಡ ಆಘಾತವಾಗಿದೆ. ಸದ್ಯ ಕಾದಾಟವು ಪೆಗು ಕ್ಷೇತ್ರದಲ್ಲಿ ನಡೆಯುತ್ತಿದ್ದು ಅಲ್ಲಿ ಜಪಾನರು ಮುನ್ನುಗ್ಗದಂತೆ ಬ್ರಿಟಿಷರು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಬ್ರಿಟಿಷ್ ಬಲಗಳು ಹಿಂದೆ ಸರಿಯುತ್ತಿರುವ ಮಾರ್ಗಗಳನ್ನು ಕತ್ತರಿಸಲು ಜಪಾನರು ನೋಡುತ್ತಿದ್ದಾರೆ. ಇಷ್ಟರ ವರೆಗೆ, ಮಿತ್ರರು ದೂರದ ಪೂರ್ವದಲ್ಲಿ ಇಷ್ಟೊಂದು ಪರಾಕ್ರಮದಿಂದ ಕಾದಾಡಿರುವುದೆಂದರೆ ಇಲ್ಲಿಯೇ! ಇಲ್ಲಿಗೀಗ ಬ್ರಿಟಿಷ್ ಟ್ಯಾಂಕುಗಳೂ, ಚೀನಾ ಸೇನೆಗಳೂ, ವಿಮಾನಗಳೂ ತಕ್ಕಷ್ಟು ಸಂಖ್ಯೆಯಿಂದ ಬಂದಿದ್ದು, ಅವು ಜಪಾನೀಯರ ಮುನ್ನಡೆಯನ್ನು ತಡೆಯುವಲ್ಲಿ ಬಹಳ ಸಹಾಯ ಮಾಡುವುದೆಂಬುದು ನಿರ್ವಿವಾದ.

ಜಾವಾದಲ್ಲಿನ ಡಚ್ಚರ ಪ್ರತಿಭಟನೆಯೂ ಈಗ ಮುಗಿದ ಹಾಗೇ! ಇದು ಅನಿರೀಕ್ಷಿತವೂ ಹೌದು; ವಿಷಾದಪೂರ್ಣವೂ ಅಹುದು. ಇದು ಮಿತ್ರ ಜನಾಂಗಗಳ ಯುದ್ಧ ಚಾತುರ್ಯದ ಯೋಜನೆಗೆ ಕೀರ್ತಿಯನ್ನು ಉಂಟುಮಾಡುವುದಲ್ಲ. ಡಚ್ಚರೇನೋ ತಮ್ಮ ಸಣ್ಣ ಸೇನೆಯೊಂದಿಗೆ ಇತಿಹಾಸದಲ್ಲೇ ಪ್ರಸಿದ್ಧವಾಗುವ ಶೂರತನದಿಂದ ಕಾದಾಡಿದರಾದರೂ, ಜಪಾನರ ದೊಡ್ಡ ಸುಸಜ್ಜಿತ ಸೇನೆಯ ಮುಂದೆ ಅದು ಪ್ರಯೋಜನಕ್ಕೆ ಬೀಳಲಿಲ್ಲ. ಡಚ್ಚರು ಮಲಯದ ಕಾಳಗಕ್ಕೆ ಬಹಳ ಸಹಾಯಮಾಡಿದವರು; ತಮ್ಮ ಮೇಲೆ ಜಪಾನರು ಬೀಳುವ ಕಾಲದಲ್ಲಿ ಮಿತ್ರರೂ ತಮ್ಮ ಸಹಾಯಕ್ಕೊದಗುವರೆಂದು ನಂಬಿದವರು. ಹಿಂದೆ ಡಚ್ ನೌಕಾಬಲವು ದೂರದ ಪೂರ್ವದ ಯುದ್ಧದಲ್ಲಿ ಧೀರತನದ ಭಾಗವಹಿಸಿದುದು ಮಾತ್ರವಲ್ಲದೆ, ಮಿತ್ರರ ಮಧ್ಯದಲ್ಲಿ ಡಚ್ಚರ ಬಲಗಳೇ ಅತ್ಯಂತ ಸಾಹಸದ ಚಟುವಟಿಕೆಗಳನ್ನು ತೋರಿದವುಗಳೆಂದೂ ಖ್ಯಾತಿ ಪಡೆದಿದ್ದುವು

ಹೀಗೆ ಡಚ್ಚರು ಮಿತ್ರರ ಸಹಾಯಕ್ಕಾಗಿ ತಮ್ಮ ಬೆಂಬಲ ಕೊಟ್ಟು ಅವರಲ್ಲಿದ್ದುದರಲ್ಲಿ ಕೆಲವು ಭಾಗ ಏರ್ಪಾಗುವಾಗಲೇ, ಜಪಾನರೂ ಅವರ ಮೇಲೆ ಬಿದ್ದರು. ಮಿತ್ರರ ಸಹಾಯಕ್ಕೆ ದಾರಿಯಲ್ಲೇ ಇದ್ದಿತು. ತಮ್ಮ ಬಳಿ ತಕ್ಕಷ್ಟು ವಿಮಾನ ಇಲ್ಲದೆ, ಜಪಾನರ ಸೈನ್ಯಗಳಿಗೆ ಉತ್ತರ ಹೇಳಲಾರೆವು ಎಂಬುದು ಡಚ್ಚರಿಗೆ ಮೊದಲೇ ತಿಳಿದಿದ್ದರೂ, ಸಹಾಯ ಒದಗದೆ ಅವರೇನು ಮಾಡಲಾಹುದು? ಆಗುವುದೇ ಆಗಿ ಹೋಯಿತು. ಶತ್ರುವು ೪ ಡಿವಿಜನ್ ಸೇನೆಗಳನ್ನು ತುದಿಳಿಸಿದಾಗ, ಡಚ್ಚರು ವಿಮಾನ ಯುದ್ಧದಲ್ಲಿ ತಮಗೆ ಪರಿಣಾಮವಿಲ್ಲವೆಂದು ಕಂಡುಕೊಂಡರು. ಆದುದರಿಂದ ಈ ಯುದ್ಧ ಈ ರೀತಿ ಪರ್ಯವಸಾನ ಹೊಂದಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. "ಅಲ್ಲಿನ ಯುದ್ಧ ಮುಗಿಯಿತೇ?" ಎಂಬುದಕ್ಕೆ, ಅಲ್ಲಿನ ಲೆ॥ ಗವರ್ನರರು ಆ ದ್ವೀಪ ಬಿಟ್ಟು ತೆರಳಿದುದೂ ಒಂದು ನಿದರ್ಶನ.

ಜಾವಾದಲ್ಲಿನ ಈ ತೇಜೋಭಂಗವು ಬ್ರಿಟನ್ ಅಮೆರಿಕಗಳಲ್ಲಿ ಬಹಳ ಕ್ಷೋಭೆಯನ್ನು ಉಂಟುಮಾಡಿದೆ. ಕಾರಣವೇನೆಂದರೆ, ಈ ಯುದ್ಧದಲ್ಲಿ ಹೀಗೆ ನಡೆಯುವುದೇ ವಾಡಿಕೆಯಾಗಿ ಹೋಗಿದೆಯಲ್ಲ ಎಂದು! ರಕ್ಷಣೆಯ ಕುರಿತು ವಿಶೇಷವಾದ ನಂಬಿಕೆ ಇಟ್ಟುಕೊಂಡಿರುವುದೂ, ವಿಮಾನಗಳು ಸಾಲದಿರುವುದೂ, ತಕ್ಕ ಹೊತ್ತಿಗೆ ಸಹಾಯ ಒದಗದಿರುವುದೂ, ರಕ್ಷಣಾಬಲಗಳು ನಿರಾಶೆಗೊಂಡು ಶರಣಾಗತವಾಗುವುದೂ ಇವೇ ಆಗಾಗಲಿನ ಅಪಜಯಕ್ಕೆ ಕಾರಣವಾಗಿದೆ. ಮಿತ್ರಬಲದವರು ಅಪಜಯದ ಮೂಲಗಳಲ್ಲಿ ಏನಿದೆ ಏನಿಲ್ಲವೆಂದು ತಿಳಿದು, ತಕ್ಕ ಬದಲಾವಣೆಗಳನ್ನು ಮಾಡದಿದ್ದಲ್ಲಿ ಎನಾ, ಮುಂದಾದರೂ ಜಪಾನರ ಹಾವಳಿಯನ್ನು ತಡೆಗಟ್ಟುವುದು ಕಷ್ಟ.

ನ್ಯೂಗಿನಿಯಲ್ಲಿ ಜಪಾನರ ದಾಳಿ

ಆಸ್ಟ್ರೇಲಿಯದ ಬುಲೊಲೊ ಬುಗಾರದ ಗಣಿಗಳ ಬಂದರವಾದ ಸಾಲಾಮಾವುವಿನಲ್ಲಿ ಜಪಾನೀಯರ ದೊಡ್ಡ ದೊಂದು ದಂಡು ಬಂದಿಳಿದಿದೆ. ಮೊರ್ಸ್‌ಬಿ ಬಂದರವನ್ನು ಜಪಾನೀ ವಿಮಾನಗಳು ಆಕ್ರಮಿಸುವ ಯತ್ನ ಮಾಡಿವೆ. ನ್ಯೂಗಿನಿಯಿಂದ ೧೮೦೦ ಮಂದಿ ಹೆಂಗಸರೂ ಮಕ್ಕಳೂ ೪೦೦ ಮಂದಿ ಮುದುಕರೂ ಹೊರಟಿದ್ದಾರೆ.

ತುರ್ಕಿಯಲ್ಲಿ

ತುರ್ಕಿಯಲ್ಲಿ ವಿದೇಶಿಯರು ಅಲ್ಲಿಂದ ತೆರಳಬೇಕೆಂಬ ಕುರಿತು ಗಲಭೆ ಇದ್ದರೂ, ನಾಜಿ ಪ್ರಚಾರ ಕಾರ್ಯವು ಅಲ್ಲಿ ಪರಿಣಾಮಕಾರಿಯಾಗಿಲ್ಲ, ತುರ್ಕಿ ಸರಕಾರ ಎಗಲೂ ತಾಟಸ್ಥ್ಯದ ಧೋರಣೆಯನ್ನೇ ನಿರ್ವಹಿಸಿದೆ ಎಂದು ತಿಳಿದುಬಂದಿದೆ.

ಶ್ರೀ ಧನಲಕ್ಷ್ಮಿ ಸ್ನಫ್ ವರ್ಕ್ಸ್,
(ಪ್ರೊ:— ಎ. ಶಿವ ಬಂಗೇರ)
ಮಾರ್ಕೆಟ್ ರೋಡು, ಮಂಗಳೂರು.
ಇಲ್ಲಿ ಒಳ್ಳೆ ಉತ್ತಮ ನಶ್ಯತಯಾರಿಸಲ್ಪಡುತ್ತದೆ.
ಒಮ್ಮೆ ಬಂದು ಪರೀಕ್ಷಿಸಿರಿ.

ಡಚ್ ಇಂಡೀಸಿನಲ್ಲಿ ಧ್ವಂಸಕಾರ್ಯ

ಡಚ್ ಇಂಡೀಸಿನಲ್ಲಿ ಧ್ವಂಸಕಾರ್ಯವಾಗಿದೆ. ಜಪಾನರಿಗೆ ಆಲ್ಲಿ ಬಾದುದು ಮುಖ್ಯವಾಗಿ ಎಣ್ಣೆ. ಎಣ್ಣೆಯ ಉತ್ಪತ್ತಿಯ ಸೇಕಡಾ ೯೦ ಪಾಲು ಜಪಾನರ ವಶವಾಗಿದ್ದರೂ ಅವುಗಳ ಧ್ವಂಸಕಾರ್ಯವು ಹೆಚ್ಚೂ ಕಡಿಮೆ ಸಂಪೂರ್ಣವಾಗಿದೆ. ಎಣ್ಣೆ ಬಾವಿಗಳನ್ನು ಬಹಳ ಆಳದ ವರೆಗೂ ನಾಶ ಮಾಡಿ, ಪ್ಲಾಂಟುಗಳನ್ನು ಹಾರಿಸಿ, ಟಾಂಕಿಗಳಿಗೆ ಬೆಂಕಿ ಕೊಡಲಾಗಿದೆ.

ಬಾಲಿಕ್ ಪಪಪೆನಿನ ಎಣ್ಣೆಬಾವಿಗಳು ಮುಂದೆಂದೂ ಎಣ್ಣೆಯನ್ನು ಉತ್ಪತ್ತಿ ಮಾಡದ ಹಾಗೆ ಧ್ವಂಸಮಾಡಲಾಗಿದೆ. ಪೇಲಂಬಾಂಗಿನಲ್ಲಿ ೬೦,೦೦೦,೦೦೦ ಪೌಂಡ್ ಬಾಳುವ ಎಣ್ಣೆ ಮತ್ತು ಪ್ಲಾಂಟುಗಳನ್ನು ನಾಶಪಡಿಸಲಾಗಿದೆ. ಒಂದು ಎಣ್ಣೆ ಕಂಪೆನಿಯ ನಷ್ಟ ಸುಮಾರು ೪೦,೦೦೦,೦೦೦ ಪೌಂಡುಗಳಷ್ಟಿರುವಾಗ, ಈಸ್ಟ್ ಇಂಡೀಸಿನಲ್ಲಿ ಎಣ್ಣೆ ಸರಬರಾಯಿಯ ಒಟ್ಟು ನಷ್ಟ ಸುಮಾರು ೧೪೦,೦೦೦,೦೦೦ ಪೌಂಡುಗಳಷ್ಟೆಂದು ತಿಳಿದುಬಂದಿದೆ.

ಜಪಾನೀಯರು ಈಸ್ಟ್ ಇಂಡೀಸಿನಲ್ಲಿ ಎಣ್ಣೆಯನ್ನು ಹಾರೈಸಿದ್ದರೆ ಅದು ವ್ಯರ್ಥ. ಎಣ್ಣೆಗಾಗಿಯೇ ಅವರು ಪೇಲಬಾಂಗಿನಲ್ಲಿ 'ಪೆರಚ್ಯೂಟ್' ಆಕ್ರಮಣ ನಡೆಸಿ, ಡಚ್ಚರು ಅಲ್ಲಿನ ಎಣ್ಣೆ ಬಾವಿಗಳನ್ನು ನಾಶಪಡಿಸದಂತೆ ನೋಡಿಕೊಂಡರು. ಆದರೆ, ಅವರಾ ಉದ್ದೇಶವು ನೆರವೇರಿಲ್ಲ. ಬೇಗನೆ ಆ ಬಾವಿಗಳು ಎಣ್ಣೆಯನ್ನೊದಗಿಸುವಂತೆಯೂ ಇಲ್ಲ.

ವಿದೇಶ — ಹಿಂದೂದೇಶ

ಜಪಾನಿನ ಮುಂದಿನ ಹೆಜ್ಜೆ

ಡಚ್ಚರನ್ನು ನೋಲಿಸಿದ ಮೇಲೆ ಜಪಾನು ಆಸ್ಟ್ರೇಲಿಯಾ ಅಥವಾ ಸಿಲೊ ಮೇಲೆ ಬೀಳಬಹುದೆಂದೂ, ಜಪಾನ್ ನಿರ್ಮಾಣಗಳ ಸಂಪಾದನೆ ಸ್ಥಯತ್ನಿಸಬಹುದೆಂದೂ, ಜಪಾನ್ ಶಿಕ್ಷಿಸಿನೊಡನೆ ತನ್ನನ್ನು ಪೋಷಿಸಳ್ಳಲು ನೋಡುತ್ತಿದೆ ಎಂದೂ ವಾರ್ತೆ.

ಬೆಂಡೋಯಿಂಗ್ ಹೋಯಿತು.

ಜಾವಾದ ಲೆ॥ ಗವರ್ನರ್ ಡಾ. ವಾನ್ ಮುಕ್‌ರವರು ಬೆಂಡೋಯಿಂಗ್ ಹೋಯಿತೆಂದು ತಿಳಿಸಿ, ಆ ದ್ವೀಪವನ್ನು ಬಿಟ್ಟು ಆಸ್ಟ್ರೇಲಿಯಕ್ಕೆ ತೆರಳಿದ್ದಾರೆ. ಡಚ್ಚರೆಲ್ಲರೂ ಎಲ್ಲ ಕಡೆಗಳಲ್ಲಿಯೂ ಏಕಾ ಏಕಿ ಶರಣಾಗತರಾಗಿಲ್ಲವೆಂದೂ, ರಕ್ಷಣೆ ಅಸಾಧ್ಯವಾದ ಕೆಲವು ಕಡೆ ಡಚ್ಚರು ಶರಣಾಗತರಾಗಿರಬಹುದೆಂದೂ ಹೇಳ ಲಾಗಿದೆ. ರೂಟರರ ಪ್ರತಿನಿಧಿ ಇನ್ನೂ ಜಾವಾದಲ್ಲಿ ಇರುವರೆಂದೂ, ಡಚ್ಚರು ಇನ್ನೂ ಕಾದಾಡುವರೆಂದೂ ಸುದ್ದಿ. ಮಿತ್ರರ ಕಡೆಯಿಂದ ಸಹಾಯವು ಇನ್ನಷ್ಟು ಹೆಚ್ಚಾಗಿ ಬಂದಿದ್ದರೆ ಜಾವಾ, ಬಲಿ ಮತ್ತು ದಕ್ಷಿಣ ಸುಮಾತ್ರಾಗಳನ್ನು ಇನ್ನು ಕೆಲವು ಕಾಲ ಉಳಿಸಿಕೊಳ್ಳಬ ಹುದಾಗಿತ್ತೆಂದು ಒಬ್ಬ ಪತ್ರಿಕಾ ಪ್ರತಿ ನಿಧಿಯ ಮಾತು.

ರಷ್ಯದವರು ಮುಂದೆ ನುಗ್ಗುತ್ತಿದ್ದಾರೆ

ಸೆಲಮಾರ್ಗ, ಸಮುದ್ರ ಮಾರ್ಗಗ ಳೆರಡರಲ್ಲಿಯೂ ರಷ್ಯದವರು ವಿಜಯ ಪಡೆಯುತ್ತಿದ್ದಾರೆ. ಇಡೀ ರಣರಂಗದ ಕಥೆಯೇ ಹಾಗೆ. ಕಾಲಿನ್ ರಂಗ, ಡಾಂಟಿ ಕ್ಷೇತ್ರಗಳಲ್ಲಿ ರಷ್ಯದವರು ಜರ್ಮನರನ್ನು ಹಿಂದೆ ಆಟ್ಟುವ ವಾರ್ತೆ ಬಂದಿದೆ. ಖಾರ್ಕೋವಿನ ಬಳಿ ಘೋರ ಯುದ್ಧವಾಗುತ್ತಿದೆ.

ರಂಗೂನಿನಿಂದ ಬ್ರಿಟಿಶ್ ಬಲಗಳು ಹಿಂದೆ ಸರಿದಿವೆ

ಬ್ರಿಟಿಶ್ ಬಲಗಳು ರಂಗೂನಿನಿಂದ ಹಿಂದೆ ಸರಿದಿವೆ; ಅಲ್ಲಿ ಆಗತಕ್ಕ ಧ್ವಂಸ ಕಾರ್ಯವೆಲ್ಲ ಪೂರೈಸಿದೆ. ನಗರವಾಸಿ ಗಳು ಒಕ್ಕಲು ತೆಗೆದಿದ್ದಾರೆ. ಪೆಗುವಿನ ಬಳಿಯಲ್ಲಿ ಘೋರ ಯುದ್ಧವಾಗುತ್ತಿದೆ.

ದಿವಂಗತ ಠಾಗೂರರ ಭಾವಚಿತ್ರ

ಡಾ. ರವೀಂದ್ರನಾಥ ಠಾಗೂರರ ಭಾವಚಿತ್ರಗಳನ್ನು ಲಂಡನಿನ "ನ್ಯಾಶನಲ್ ಚಿತ್ರಗಳ ಗ್ಯಾಲರಿ"ಗಳಲ್ಲಿ ತೂಗಾಡಿಸಲು ಅನುಮತಿ ದೊರಕಿದೆ. ಆಕ್ಸ್‌ಫರ್ಡ್ ವಿಶ್ವನಿದ್ಯಾನಿಲಯದಲ್ಲಿ "ಠಾಗೂರರ ಆಚಾರ್ಯ ಪದವಿ"ಯನ್ನು ಸ್ಥಾಪಿಸುವ ಯೋಜನೆಯೂ ನಡೆದಿದೆ.

ರಂಗೂನನ್ನು ಬಿಡಲು ಕಾರಣವೇನು?

ರಂಗೂನನ್ನು ಬ್ರಿಟಿಶ್ ಬಲಗಳು ಬಿಟ್ಟು ಹೊರಲು ಕಾರಣವೇನೆಂದು ಈಗ ತಿಳಿದುಬಂದಿದೆ. ಇನ್ನು ಮಧ್ಯ ಬರ್ಮದಲ್ಲಿ ಯುದ್ಧ ನಡೆಯಲಿದೆ. ಶತ್ರು ಗಳು ಪೆಗುವಿನ ಉತ್ತರದಲ್ಲಿ ಚಟುವಟಿಕೆ ಗಳನ್ನು ತೋರಿಸುತ್ತಿದ್ದಾರೆ.

ಕೊನೆಯಬ್ಬು

ಬ್ರಿಟಿಷ್ ಸರಕಾರವು ಮಾಡಿರುವ ಭಾರತದ ರಾಜ್ಯಘಟನೆಯ ಸೂಚನೆಗೆ ಭಾರತೀಯರ ಒಪ್ಪಿಗೆಯನ್ನೂ ಪಡೆಯ ಲಿಕ್ಕಾಗಿ, ಸರ್ ಸ್ಟಾಫರ್ಡ್ ಕ್ರಿಪ್ಸರು ಇಂಡಿಯಕ್ಕೆ ಬರಲಿದ್ದಾರೆ; ೫೦ ಮಂದಿ ಬ್ರಿಟಿಷ್ ಸೇನೆಯ ಅಧಿಕಾರಿಗಳನ್ನೂ, ಮಂದಿಯನ್ನೂ ಕೈಕಾಲು ಕಟ್ಟಿ ಹಾಂಗ್ ಕಾಂಗಿನಲ್ಲಿ ಜಪಾನರು ಬೆಯನೆಟು ಗಳಿಂದ ತಿವಿದು ಕೊಂದ ವಾರ್ತೆ ಬಂದಿದೆ; ಜಪಾನೀಯರು ಬರ್ಮದಲ್ಲಿ ರಂಗೂನಿಗೆ ೬೦ ಮೈಲು ದೂರವಿರುವ ಥಾರಾವಾಡ್ಡಿಯನ್ನು ಹಿಡಿದಿರುವರೆಂದು ಅವರ ಹೇಳಿಕೆ; ಶ್ರೀ. ಎಂ. ಸಿ. ಪೈ, ಐ.ಸಿ.ಎಸ್. ಅವರು, ಕಾಫಿ ಕಂಟ್ರೋಲರರಾಗಿರುವವರು ಮದ್ರಾಸ್ ಸರಕಾರದ ನೂಲಿನ ಕಮಿಶನರರಾಗಿ ನೇಮಿಸಲ್ಪಟ್ಟಿದ್ದಾರೆ.

ನೋಟೀಸು

ಪುತ್ತೂರು
ಡಿ। ಮುನ್ಸಿ ಕೋರ್ಟಿನಲ್ಲಿ
O. S. 436/41.

Y. ರಾಮಚಂದ್ರ ಶ್ಯಾನುಭೋಗ— **ವಾದಿ**

ಕುಂಞಿಪಳ್ಳಿ ಬ್ಯಾರಿ, ಹುಸ್ಸೇನ ಕುಂಞಿ ಬ್ಯಾರಿ ಮಗ, ಪುತ್ತೂರು ತಾಲೂಕು, ಮೂಡ್ನೂರು ಗ್ರಾಮದ ಅಮ್ಟಿನಡ್ಕ — **ಪ್ರತಿವಾದಿ.**

ವಾದಿಯು ಪ್ರತಿವಾದಿ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾ. 20-3-42ಕ್ಕೆ ಇಟ್ಟಿರುವುದರಿಂದ ಆ ಕುರಿತು ಪ್ರತಿವಾದಿಯು ಉದಾಹರಣೆ ಇದ್ದರೆ ಸದರಿ ವಾಯಿದೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸಿಕೊಳ್ಳ ತಕ್ಕದ್ದೆಂತಲೂ ತಪ್ಪಿದರೆ ಪ್ರತಿವಾದಿಯ ಗೈರುಹಾಜರಿಯಿಂದ ತೀರ್ಮಾನಿಸಲಾ ದೀತೆಂತಲೂ ಈ ಮೂಲಕ ತಿಳಿಯಪಡಿ ಸೋಣವಾಗಿಯದೆ.

B. Chidanand Rao,
Pleader for Plaintiff.
Puttur, 2-3-42.

ನೋಟೀಸು

ಪುತ್ತೂರು ಡಿಸ್ಟ್ರಿಕ್ ಮುನ್ಸಿಫ್
ಕೋರ್ಟಿನಲ್ಲಿ
O. P. 8/1942.

ನಾಗಮ್ಮಾ— **ಅರ್ಜಿದಾರಳು**

ಮತ್ತು

1. ಸಾವಿತ್ರಿ ಕಿನಿಯಮ್ಮ, 2. ಶ್ರೀಮತಿ ಲಕ್ಷ್ಮೀಮತಿ— **ರೆಸ್ಪೊಂಡೆಂಟರು.**

ಮೃತಪಟ್ಟ ತನ್ನ ಗಂಡ ಕೋಟಿ ಯಣ್ಣ ಬಲ್ಲೋಳಿಯವರಿಗೆ ಬಹಾ ಸೇವಿಂಗ್ಸ್ ಬೇಂಕ್ ವ ವೋರ್ ಬೋಂಡಿನ ಹಣ ಕೂಡಾ ರೂ. 52-14-1ನ್ನೂ ವಸೂಲು ಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿ ದಾರಳು ದಾಕಲು ಮಾಡಿದ ಮೇಲ್ಕಂಡ ಅರ್ಜಿ ಇದೇ ಮಾರ್ಚಿ 19ಕ್ಕೆ ತನಿಖೆ ಗಿಟ್ಟಿರುವ ಪ್ರಯುಕ್ತ ಆ ದಿವಸ ಕೋರ್ಟು ಸಮಯಕ್ಕೆ ಹಾಜರಾಗಿ ಆಕ್ಷೇಪಗಳಿದ್ದಲ್ಲಿ ಜ್ಯಾಹೀರು ಮಾಡ ತಕ್ಕದ್ದು ಎಂಬದಾಗಿ ಈ ಮೂಲಕ ತಿಳಿ ಸಿಯದೆ.

ಕೆ. ಎನ್. ಮುಳ್ಯ,
ಅರ್ಜಿದಾರಳ ವಕೀಲ್.

ಪುತ್ತೂರು, ತಾ. 11-3-1942.



ಒಂದು ಪರಿಪೂರ್ಣವಾದ ಕೆಲಸ

ರೋಗಗಳಿಗೆ ಕಾರಣೀಭೂತವಾದ ಕಶ್ಮಲವನ್ನು ನಿಮ್ಮ ಶರೀರದಿಂದ ತೆಗೆದೊಗೆಯಿರಿ.

ಗಂಟಲು ನೋವು, ಗಂಟಲು ಬಾತು ಹೋಗುವಿಕೆ ಮುಂತಾದ ಯಕ್ಕೆ ಸಂಬಂಧಪಟ್ಟ ರೋಗ ಮತ್ತು ಅಪಾಯಕರವಾದ ಕೆಮ್ಮು ಇವುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ.

ಯಾವ ತರದ ಕೆಮ್ಮಿಗೂ ಗ್ಲೈಕೊಡಿನ್ ಟರ್ಪ್ ವಾಸಕವನ್ನು ಉಪಯೋಗಿಸಿರಿ. ಎಂತಹ ರೀತಿಯ ಸಾಂಕ್ರಮಿಕತೆಯನ್ನೂ ಅದು ನಿರ್ಮೂಲಗೊಳಿಸುತ್ತದೆ. ಅದರ ಉಪಶಮನಕಾರಿ ಮತ್ತು ಗುಣಕಾರಿ ಶಕ್ತಿಯು ಕೆಮ್ಮನ್ನು ಪರಿಪೂರ್ಣವಾಗಿ ನಿಲ್ಲಿಸಿಬಿಡುವುದು.

ಯಾವಾಗಲೂ ನಿಮ್ಮ ಮನೆಯಲ್ಲಿ ಒಂದು ಬಾಟ್ಲಿಯನ್ನು ಇಟ್ಟುಕೊಂಡಿರಿ.



ಘನವನ್ನೈದಿದ ಆರನೆ ಜಾರ್ಜ್ ಮಹಾಪ್ರಭುಗಳು
ಮದ್ದುಗುಂಡಿನ ಕಾರ್ಖಾನೆಯನ್ನು ಸಂದರ್ಶಿಸುತ್ತಿರುವುದು

ಯಾವ ಕಾರ್ಖಾನೆಯಲ್ಲಿ ಹಿಂದೆ ಮಕ್ಕಳ ಕುರ್ಚಿ, ಮಕ್ಕಳ ಮಂಚ ಮೊದ ಲಾದುವು ತಯಾರಾಗುತ್ತಿದ್ದುವೋ ಅಲ್ಲಿ ಈಗ ಮಹಿಳಾ ಕೆಲಸಗಾರರು ಮದ್ದು ಗುಂಡನ್ನು ತಯಾರಿಸುತ್ತಿದ್ದಾರೆ. ರಾಯಲ್ ವಿಮಾನ ಬಲದಲ್ಲಿ ಉಪಯೋಗಿಸ ಲಿರುವ ಜರ್ಮನ್ ವಿಮಾನದ ಒಂದು ಮಾದರಿಯ ಕೊನೆಯ ಕಾರ್ಯಗಳನ್ನು ಇಲ್ಲಿ ಒಬ್ಬ ಹುಡುಗಿ ಪೂರೈಸುತ್ತಿದ್ದು ಅದನ್ನು ನಮ್ಮ ಚಕ್ರವರ್ತಿಗಳು ಈಕ್ಷಿಸುತ್ತಿದ್ದಾರೆ.

ಮಂಗಳೂರು

ವರ್ಗ.

ಗುಂಟೂರಿನ ಜಿಲ್ಲಾ ಪೊಲೀಸ್ ಸುಪರಿಂಟೆಂಡೆಂಟ್ ರಾವ್ ಬಹದೂರ್ ಕೆ. ಪಿ. ಜನಾರ್ಧನ ರಾವ್ ಅವರು ಪೊಲೀಸ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಶ್ರೀ॥ ಎ. ನಾರಾಯಣ ಪೊಲೀಸ್ ಸುಪರಿಂಟೆಂಡೆಂಟ್, ಅವರು ಗುಂಟೂರು ಜಿಲ್ಲಾ ಸುಪರಿಂಟೆಂಡೆಂಟರ ವರ್ಗಾಯಿಸಲ್ಪಟ್ಟಿದ್ದಾರೆ.

ಲ್ ಮುಹಮ್ಮದನ್ ವರ್ಧಂತಿ

ನ.

ವರ್ಧಂತಿ ಉತ್ಸವ ಇದೇ ತಾ. ೧೪ನೇ ಶನಿವಾರ ಸಂಜೆಗೆ ಆ ಶಾಲಾ ವಠಾರದಲ್ಲಿ ಜಿಲ್ಲಾ ಕಲೆಕ್ಟರ್ ಎಂ. ಕರಮುಸ್ತಾಫಯಂ ಐ. ಸಿ. ಎಸ್. ತೆಯಲ್ಲಿ ಜರುಗುವುದು. ರಾ ಶ್ರೇಯೋಭಿ ಪ್ರಾರ್ಥನೆಯನ್ನು ಲ್ ಮುಹಮ್ಮದ್ ಅಬ್ಬು ಸಾಹೇ ಮಾಡುವರು. ಸ್ವಾಗತ ಗೀತೆ, ವರದಿವಾಚನ, ಬಹುಮಾನ ಣ, ವಿವಿಧ ವಿನೋದಾವಳಿ ಮೊದ ಲಾದ ಮನೋಹರ ಕಾರ್ಯಕ್ರಮ ಗಳಿವೆ.

ಮುನ್ಸಿಪಲ್ ವೋಟಿಂಗ್.

ಈ ವೋಟಿಂಗ್ ಸ್ಥಳೀಯ ಮು॥ ನೌ॥ ಕಾರ್ಯಾಲಯದಲ್ಲಿ ಇದೇ ಬರುವ ತಾ. ೧೬ನೇ ಸೋಮವಾರ ಸಂಜೆ ಜರುಗುವುದು.

ಲ್ ಇಂಡಿಯನ್ ನೌಕಾ ದ ರಿಕ್ರ್ಯೂಟ್‌ಮೆಂಟ್.

ಇದೇ ಏಪ್ರಿಲ್ ತಾ. ೩ರಲ್ಲಿ ಬೆಳಿಗ್ಗೆ ಸ್ಥಳೀಯ ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ಈ ರಿಕ್ರ್ಯೂಟ್‌ಮೆಂಟ್ ಜರುಗುವುದು.

ಜೋಡಾಟ.

ಘನವನ್ನೈದಿದ ಮದ್ರಾಸ್ ಗವರ್ನರರ ಯುದ್ಧ ನಿಧಿಯ ಸಹಾಯಕ್ಕಾಗಿ ಇದೇ ತಾ. ೧೪—೧೫ರಲ್ಲಿ ಮಂಗಳೂರು ಡಿವಿಜನ್ ಯುದ್ಧಕಾರ್ಯದ ಆರ್ಥಿಕ ಸಮಿತಿಯ ಆಶ್ರಯದಲ್ಲಿ ಹೆ॥ ಕ್ವಾರ್ಟರ್ಸ್. ಡಿ॥ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಬಜಪೆಯಲ್ಲಿ ಶ್ರೀ ಕಟೀಲು ಮುಲ್ಕಿ ದಶಾವತಾರ ಮೇಳಗಳ ಜೋಡಾಟ ನಡೆಯುವುದು. ಶನಿವಾರ ಕಥೆ "ಶನೈಶ್ಚರ ಮಹಾತ್ಮೆ;" ಆದಿತ್ಯವಾರ "ಶ್ರೀ ವಿಘ್ನೇಶ್ವರ ವಿಜಯ".

ಕುಂದಾಪುರ

ಕಳೆದ ತಾ. ೫ರಲ್ಲಿ ಶ್ರೀಮತ್ ವಾದಿರಾಜರ ಪುಣ್ಯದಿನವು ವಾದಿರಾಜರ ಜನ್ಮಭೂಮಿಯಾದ ಹೂವಿನ ಕೆರೆಕ್ಷೇತ್ರದಲ್ಲಿ ಶ್ರೀ. ವಾದಿರಾಜರ ಸನ್ನಿಧಾನದಲ್ಲಿ, ಉಡುಪಿ ಶ್ರೀ ಶೀರೂರು ಮಠದ ಲಕ್ಷ್ಮೀಂದ್ರತೀರ್ಥ ಶ್ರೀ ಪಾದಂಗಳವರ ಉದಾರ ನೇತೃತ್ವದಿಂದ ಜರಗಿತು. ಬೆಳಿಗ್ಗೆ ವಾದಿರಾಜರ ಭಾವಚಿತ್ರದ ಮೆರವಣಿಗೆ, ಮಹಾಪೂಜೆ, ಬ್ರಾಹ್ಮಣ ಸಂತರ್ಪಣೆ, ಇತ್ಯಾದಿ ಕಾರ್ಯಕ್ರಮಗಳು ಜರುಗಿದುವು. ಸಂಜೆ ಶ್ರೀ ಲಕ್ಷ್ಮೀಂದ್ರತೀರ್ಥ ಶ್ರೀಗಳ ಅಧ್ಯಕ್ಷತೆಯಲ್ಲಿ ಮಹಾಸಭೆಯು ಜರಗಿ, ವಿದ್ವಾನ್ ಪಿ. ಕೆ. ಆಚಾರ್ಯ ಪಂಡಿತ ಶ್ರೀ. ಅಗ್ರಹಾರ ನಾರಾಯಣ ತಂತ್ರಿ ಮುಂತಾದವರು ಶ್ರೀ ವಾದಿರಾಜರ ಚರಿತ್ರೆ ಮತ್ತು ಗ್ರಂಥಗಳ ವಿಮರ್ಶೆ ಮಾಡಿದರು. ಅಧ್ಯಕ್ಷರ ಬೋಧಪ್ರದವಾದ ಭಾಷಣವಾದ ಮೇಲೆ ಶ್ರೀ. ಕೆ. ಎಸ್. ಪದ್ಮನಾಭಾಚಾರ್ಯರ ಸಂಗೀತ ಮತ್ತು ರಾತ್ರೆ ಪೂಜೆಗಳೂ ಆಗಿ ಶ್ರೀ. ಕಿನ್ನಿಮೂಲ್ಕಿ ಅನಂತ ಪದ್ಮನಾಭಾಚಾರ್ಯರು ವಾದಿರಾಜ ವಿರಚಿತವಾದ "ರುಕ್ಮಿಣೀಶ ವಿಜಯ" ವನ್ನು ಹರಿಕಥಾ ರೂಪವಾಗಿ ವಿವರಿಸಿದರು.

೨—೩ ವಾರಗಳಿಂದ ಇಲ್ಲಿ ಲಕ್ಷ್ಮೀ ನಾರಾಯಣ ಟಾಕೀಸಿನವರು, ಚಲನ ಚಿತ್ರಗಳನ್ನು ಪ್ರದರ್ಶಿಸಲು ತೊಡಗಿರುತ್ತಾರೆ.

ಕಳೆದ ವಾರ ಕುಂದೇಶ್ವರದಲ್ಲಿ ಸಪ್ತಾಹ ಭಜನೆಯು ಸಂತರ್ಪಣೆ, ಮೆರವಣಿಗೆ, ಪೂಜೆ ಇತ್ಯಾದಿ ಕಾರ್ಯಕ್ರಮಗಳಿಂದ ಸಾಂಗವಾಗಿ ನಡೆಯಿತು.

ಶ್ರೀ. ನಾರಾಯಣ ಕಿಲ್ಲೆಯವರು ಕುಂದಾಪುರಕ್ಕೆ ಬಂದು ಹರಿಜನರ

ನೋಟೀಸು

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 350/1940.

ಕ್ರಮ ಅಮ್ಲಜ್ಜಾರಿ ನಂಬ್ರ 21/1942.

ಶ್ರೀಧರ ಭಟ್ಟ–**ಅರ್ಜಿದಾರ–ವಾದಿ.**

ಮತ್ತು

1 ದೋಗ್ರ ಸೆಟ್ಟ, 2 ಕೊರಗ ಸೆಟ್ಟ, 3 ಸೇತಿ ಸೆಡ್ತಿ, 4 ಶೀನ ಸೆಟ್ಟ, 5 ಲಿಂಗಮ್ಮ ಸೆಡ್ತಿ, 6 ಲೀಲಾವತಿ, 7 ಲಕ್ಷ್ಮಿ, 8 ಅಪ್ಪಿ,—ಮ್ಯಾನರರು ಗಾರ್ಡಿಯನ್ ತಾಯಿ 5ನೇ ರೆಸ್ಪೊಂ. 9 ಐತು ಸೆಟ್ಟ.–**ರೆಸ್ಪೊಂಡೆಂಟರು–ಪ್ರತಿವಾದಿರು.**

ಕೊರಗ ಸೆಟ್ಟ 2ನೇ ರೆಸ್ಪೊ.– ತಬುರ ಸೆಟ್ಟ ಯಾನೆ ಬಗ್ಗ ಕಿಲ್ಲನ ಅಳಿಯ, ಸೇತಿ ಸೆಡ್ತಿ–3ನೇ ರೆಸ್ಪೊ. ಕೊರಗ ಸೆಟ್ಟ ಸಹೋದರಿ, ಲಿಂಗಮ್ಮ ಸೆಡ್ತಿ 5ನೇ ರೆಸ್ಪೊ.– ಶೀನ ಸೆಟ್ಟ ಸಹೋದರಿ, 5ನೇಯವಳು ತನ್ನ ಮ್ಯಾನರ ಮಕ್ಕಳ ಗಾರ್ಡಿಯನ್ ಆಗಿ ಸಹಾ ಇವರಿಗೆ—

ಮೇಲೆ ಹೆಸರು ಕಾಣಿಸಿದ ಅರ್ಜಿದಾರ ಡಿಕ್ರಿಯಲ್ಲಿ ಜವಾಬ್ದಾರಿಯಿರುವ ಆಸ್ತಿ ಏಲಂ ಬಗ್ಗೆ ಅರ್ಜಿ ಮಾಡಿರುತ್ತಾನೆ. ಸದರಿ ಏಲಮಿನ ಇಸ್ತಿಹಾರು ಷರತು ನಿರ್ಣಯಿಸುವ ಬಗ್ಗೆ ತಾರೀಕು 25—3—1942 ಕ್ಕೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪವಿದ್ದ ರೆಸ್ಪೊಂಡೆಂಟರು ಸದರಿ ತಾರೀಕಿನ ಬೆಳಿಗ್ಗೆ 10-30ಕ್ಕೆ ಸದರಿ ಕೋರ್ಟು ಮುಂದೆ ಹಾಜರಾಗಿ ತಮ್ಮ ಆಕ್ಷೇಪವನ್ನು ಜ್ಞಾಹೀರುಪಡಿಸತಕ್ಕದ್ದು.

ಕೋರ್ಟು ಹುಕ್ಕುಂ ಪ್ರಕಾರ

B. R. Vyasarayachar,

ಅರ್ಜಿದಾರನ ಕಡೆ ಎಡ್ವೊಕೇಟ್.

ಮಂಗಳೂರು, ತಾ. 7 3–1942.

ಅವಳು ಒಳ್ಳೆಯ ಪರಿಮಳವನ್ನು ಇಚ್ಛಿಸುತ್ತಾಳೆ—
ಮತ್ತು ಅದನ್ನು ಸಾಬೂನಿನಲ್ಲಿಯೇ ಪಡೆಯುತ್ತಾಳೆ

ನಿಜವಾಗಿಯೂ ಪರಿಮಳವನ್ನು ಸೊಗಸಾದ ರೀತಿಯಲ್ಲಿ ಉಪಯೋಗಿಸುವುದೆಂದರೆ ವಿನೋಲಿಯ ಸೋಪಿನಿಂದ ನಿತ್ಯವೂ ಸ್ನಾನಮಾಡುವುದು. ಕೆನೆಯಂತೆ ಬಿಳುಪಾಗಿರುವ ಈ ಮನೋಹರವಾದ ಸೋಪಿನಿಂದ ಸ್ನಾನಮಾಡಿದ ಮೇಲೆ ಗುಲಾಬಿ ಹೂಗಳ ಸುಗಂಧವು ಬಹುಕಾಲ ನಿಲ್ಲುತ್ತದೆ. ಆದರ ಮನೋಹರವಾದ ವಾಸನೆ—ನಿಮ್ಮ ಮನರಂಜಿಸಿ, ಅಹ್ಲಾದಗೊಳಿಸಿ, ಉಲ್ಲಾಸಕರವಾಗಿ ಇಡುತ್ತದೆ. ಆಕರ್ಷಣೀಯತೆಯನ್ನು ಪಡೆಯಲು ಅನೇಕ ತರುಣರು ವಿನೋಲಿಯ ಸೋಪನ್ನೇ ಈಗ ಉಪಯೋಗಿಸುತ್ತಾರೆ.

ವಿನೋಲಿಯ ವ್ಹೈಟ್ ರೋಸ್ ಸೋಪು

WR. 11-172. KN VINOLIA CO., LIMITED, LONDON, ENGLAND

ವಿದ್ಯಾರ್ಥಿಭವನಕ್ಕೆ ಧನ ಸಂಗ್ರಹ ಮಾಡಿದ್ದಲ್ಲದೆ, ಕರ್ನಾಟಕ ಸಾಹಿತ್ಯ ಸಂಘ, ವಿದ್ಯಾರ್ಥಿ ಸಂಘಗಳಲ್ಲಿ ೩ ಭಾಷಣಗಳನ್ನೂ ಮಾಡಿದರು.

ಜಮಖಂಡಿ ಶ್ರೀಮತೀ ಸೋನಾಬಾಯಿಯವರು ಅಲ್ಲಲ್ಲಿ ಹರಿಕಥಾ ಕಾಲಕ್ಷೇಪವನ್ನು ಮಾಡುತ್ತ ಇದ್ದಾರೆ.

ಆಧುನಿಕ ಕನ್ನಡ ಕವಿಕುಲತಿಲಕನಾದ ಮುದ್ದಣ್ಣನ ಜಯಂತಿಯು ಸ್ಥಳೀಯ ಕರ್ನಾಟಕ ಸಾಹಿತ್ಯ ಸಂಘದಾಶ್ರಯದಲ್ಲಿ ಬರುವ ತಾ. ೧೫ರಲ್ಲು ಜರಗಲಿರುವುದು. ಶ್ರೀ ಉಡುಪಿ ಕೃಷ್ಣಜಿಯನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ. ಕೆ. ವೆಂಕಟರಾಮಾಚಾರ್ಯರು ಅಧ್ಯಕ್ಷರಾಗಲು ಸಮ್ಮತಿಸಿರುವರು.

ಅಮೆರಿಕದ ನೌಕಾಬಲದ ಪಟ್ಟು

ಎಡ್ಮಿರಲ್ ಸ್ಟಾರ್ಕ್ ಅವರು ಯುರೋಪೀಯ ಜಲಧಿಯಲ್ಲಿ ಅಮೆರಿಕದ ನೌಕಾಬಲಗಳ ಸರ್ವ ಸೇನಾಪತಿಗಳಾಗಿ ನೇಮಕಹೊಂದಿದ್ದಾರೆ. ಅಮೆರಿಕಾ ಸಂಸ್ಥಾನದ 'ನೌಕಾಧಿಪತಿಗಳಾದ ಎಡ್ಮಿರಲ್ ಕಿಂಗ್ ಅವರಿಗೆ ಹೆಚ್ಚಿಗಿನ ಅಧಿಕಾರ ಕೊಡಲಾಗಿದೆ. ಇನ್ನೂ ಕೆಲವು ಬದಲಾವಣೆಗಳಾಗಬಹುದೆಂದು ವದಂತಿ.

ಜಪಾನರ ಹಡಗುಗಳು ಮುಳುಗಿದುವು

ಅಮೆರಿಕದ ಸಬ್‌ಮೆರೈನುಗಳು ಒಂದು ಜಪಾನೀ ಡಿಸ್ಟ್ರಾಯರನ್ನೂ, ಒಂದು ನೌಕಾ ಟ್ಯಾಂಕರನ್ನೂ ಮುಳುಗಿಸಿ ೩ ಜಪಾನೀ ಕ್ರುಯಿಜರುಗಳನ್ನೂ, ಒಂದು ವಿಮಾನ ನಾಶಗಿಸುವ ಕ್ರುಯಿಜರನ್ನೂ ಗಾಸಿಗೊಳಿಸಿವೆ.

ಇತರ ವಾರ್ತೆಗಳು

ಮುಸ್ಲಿಂ ಲೀಗಿನ ವರ್ಕಿಂಗ್ ಕಮಿಟಿ ಮೆಂಬರಿಕೆಗೆ ಪಂಜಾಬ್ ಪ್ರಧಾನರು ರಾಜೀನಾಮೆಕೊಟ್ಟಿದ್ದಾರೆಂದು ಸುದ್ದಿ; ಚಾಟ್ಟೂರ್ ರೈಲ್ವೆ ಸ್ಟೇಶನ್ ಬಳಿ ಮೈಲುಗಳನ್ನು ಹೊರುವ ಜವಾನರನ್ನು ಗಾಸಿಗೊಳಿಸಿ, ಡಕಾಯಿತರು ಸ್ಟೈಲ್ ಚೀಲಗಳನ್ನು ಅಪಹರಿಸಿದ್ದಾರೆ; ಭಾಗಲ್ಪುರದಲ್ಲಿ ಇನ್ನೂ ಒಂದು ವರ್ಷ ಶಿಕ್ಷಾರ್ಥವಾದ ಪೋಲೀಸ್ ಸಿಬಂದಿ ಇರುವುದು.

ಇಂಡಿಯಾ ಆಫೀಸಿನ ಭವಿಷ್ಯವೇನು?

ಈಚಿಗೆ ಲಂಡನಿನ ಪ್ರಮುಖ ವಾರ್ತಾಪತ್ರಿಕೆಗಳಲ್ಲಿ, ಇಂಡಿಯದ ರಾಜಕೀಯ ಭವಿಷ್ಯಗಳ ಕುರಿತಾಗಿ ಪ್ರಚಂಡ ವಾರ್ತೆಗಳಿಂದ, ಬ್ರಿಟಿಷ [illegible]ಮಂಡಲವು ಇಂಡಿಯದ ವಿಷಯ ತನ್ನ ಕೊನೆಯ ನಿರ್ಧಾರ ಮಾ[illegible]ಾಗಿ ತಿಳಿಯಬಹುದಾಗಿದೆ. ಬರ[illegible]ಲರದ ಸುಮಾರಿನಲ್ಲಿ ನಿರೀಕ್ಷಿಸಲಾದ ಪ್ರಭುತ್ವದವರ ಆ ಪ್ರಕಟಣೆಯಲ್ಲಿ, ವೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಹಿಂದೀಯರನ್ನೇ ಹೆಚ್ಚಾಗಿ ನೇಮಿಸುವ ಇದೊಂದು ರಿಯಾಯಿತಿ ಮಾತ್ರ ಹಾಕೈಸಬಹುದೆಂದು ಹೇಳಲಾಗಿದೆ. ಪ್ರಧಾನರೇನೋ ಬೇಗನೇ ಆ ಹೇಳಿಕೆಯನ್ನು ಮುಂಡಿಸಿದರೂ ಅದರ ಕುರಿತಾದ ಚರ್ಚೆಗೆ ಮತ್ತೂ ಒಂದು ವಾರ ಬೇಕೆಂದು ಸುದ್ದಿ.

ಈ ಚರ್ಚೆ ಮುಖ್ಯವಾಗಿ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರ ಕೈಯಲ್ಲಿರುವುದೆಂದು ನಂಬಲಾಗಿದೆ. ಯುದ್ಧ ಮುಗಿದ ಬಳಿಕ—ಪ್ರಾಯಶಃ ೩ ವರ್ಷಗಳ ಬಳಿಕ,—ಇಂಡಿಯಕ್ಕೆ ಡೊವಿನಿಯನ್ ಸ್ಟಾಟಸ್ ದೊರಕುವುದೆಂಬ ಈ ವಾಗ್ದಾನವನ್ನು ಪ್ರಭುತ್ವದವರು ಕೊಡಬಹುದೆಂದು ವದಂತಿ.

ಭಾರತದ ಸಚಿವೋತ್ತಮರಾದ ಮಿ। ಅಮರಿಯವರು, ಕೆಲವು ದಿನಗಳ ಹಿಂದೆ, ನಮ್ಮ ಚಕ್ರವರ್ತಿಗಳ ಭೇಟಿ ಪಡೆದರು. ಒಂದು ವೇಳೆ, ಮಿ। ಚರ್ಚಿಲ್ಲರು ಮಿ। ಅಮರಿಯವರ ಸ್ಥಾನಕ್ಕೆ ಮತ್ತೊಬ್ಬ ಯೋಗ್ಯ ಪುರುಷರನ್ನು ನೇಮಿಸಬಹುದೆಂಬ ವದಂತಿ ಹರಡಲು ಈ ಭೇಟಿ ಕಾರಣವಾಗಿದೆಯಾದರೂ, ಈ ವದಂತಿಗೆ ತಕ್ಕಷ್ಟು ಆಧಾರಗಳಿಲ್ಲ. ಇಂಡಿಯಾ ಆಫೀಸನ್ನು ರದ್ದುಮಾಡುವರೆಂಬ ವಾರ್ತೆ ಬಲವಾಗಿದೆ; ಆದರೆ ಸಂಬಂಧಪಟ್ಟವರು ಇಲ್ಲಿಯೂ ಸುಮ್ಮನಿದ್ದಾರೆ. ಒಟ್ಟಿನಲ್ಲಿ ಭಾರತವು ಇತರ ಡೊವಿನಿಯನುಗಳಿಗೆ ಸಮಾನವೆಂದು ಏರ್ಪಡಿಸಿದಲ್ಲಿ, ಹಾಗೆ ಒಪ್ಪುವಂಥ ಹೊಸ ಕಾರ್ಯನೀತಿಯನ್ನು ಸರಕಾರವು ಅನುಸರಿಸುವ ಪಕ್ಷದಲ್ಲಿ ಆಗ ಮಾತ್ರ, ಇಂಡಿಯಾ ಆಫೀಸ್ ರದ್ದಾಗುವುದೆಂಬ ಪ್ರತೀತಿಯೂ ಇದೆ.

ಸ್ವೀಕಾರ

ಹುಬ್ಬಳ್ಳಿ ಗಜೆಟ್

ಡಾ. ನಾ. ಸು. ಹರ್ಡಿಕರ್ ಸಂಪಾದಕರಾಗಿ ಶ್ರೀ. ರಾ. ವೆ. ಕುರಗುದರಿಯವರು ಸಹಸಂಪಾದಕರಾಗಿ, ಸ್ಥಳೀಯ ಸಂಸ್ಥೆಗಳ ನಾನಾ ಸಮಸ್ಯೆಗಳಿಗೆ ಎಂಸಲಾಗಿರುವ ಕರ್ನಾಟಕದ ಈ ಮಾದರಿಯ ಒಂದೇ ಒಂದು ಪತ್ರಿಕೆಯಾದ ಇದು ಈಚೆಗೆ ತನ್ನ ವಿಶೇಷವಾದಳನೆಯ ಜನ್ಮ ದಿನಾಂಕವನ್ನು ಹೊರಡಿಸಿ ಸೇವೆ ಸಲ್ಲಿಸಿದೆ. ಈ ಅಂಕದಲ್ಲಿ ಪ್ರಸಿದ್ಧ ಲೇಖಕರೂ, ಮುಂದಾಳುಗಳೂ ಆಗಿರುವ ಶ್ರೀಗಳಾದ ಎಸ್. ಸತ್ಯಮೂರ್ತಿ, ಆರ್. ಕೆ. ಸಿದ್ಧ, ಶ್ರೀ. ಕೆ. ಪಟ್ಟಾಭಿ ರಾಮನ್, ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ, ಕೆ. ಸಂಪದ್ಗಿರಿರಾವ್, ಪಂಡಿತ ತಾರಾನಾಥ, ಶ್ರೀಗಳಾದ ಡಿ. ಕೆ. ಭಾರದ್ವಾಜ, ಆರ್. ವಿ. ಜಟಾರ, ಸೌ॥ ಕೃಷ್ಣಾಬಾಯಿ ಪಂಜಿಕರ್, ಶ್ರೀ. ಉನೂಬಾಯಿ ಕುಂದಾಪುರ, ಡಾ. ವಿಠಲ ಸೆಟ್ಟಿ, ಎಸ್. ಎಸ್. ಕಾರಂತ, ನಾರಾಯಣ ಕಲ್ಲೆ ಮೊದಲಾದವರ ವಿಚಾರಪೂರ್ಣ ಲೇಖಗಳೂ ಇವೆ, ಕಾವ್ಯಗಳೆರಡೂ ಇವೆ. ದೊಡ್ಡ ಆಕಾರದ ಈ ಅಂಕದ ಬೆಲೆ,—ಕೇವಲ ನಾಲ್ಕಾಣೆ! ಸಂಗ್ರಹಯೋಗ್ಯವಾದುದು.

ಮದ್ರಾಸು ಗವರ್ನರರ ಯುದ್ಧ ಫಂಡು

ದ. ಕ. ಜಿಲ್ಲೆಯಲ್ಲಿ ದಶಂಬರ ತಿಂಗಳಲ್ಲಿ ಧನಸಹಾಯ ಮಾಡಿದವರ ಹೆಸರಿನ ಪಟ್ಟಿ.

ಭಾಗ ೧

12—0—0

(7) ರಾವ್ ಸಾಹೇಬ್ ಬಿ. ಆನಂದ ಬಾಳಿಗಾ.

11—8—0

(4) ರಾವ್‌ಸಾಹೇಬ್ ಎಕ್ಸ್. ಕ್ಯಾಸೊ.

10—0—0

(5) ಕ್ಯಾಪ್ಟನ್ ಸಿ. ಕೆ. [illegible]

(2/3) ರಾವ್‌ಬಹದೂರ್ [illegible] ಪಿಂಟೊ.

8—0—0

(22) ರಾವ್‌ಸಾಹೇಬ್ ಯು[illegible]

(5) ರಾವ್‌ಬಹದೂರ್ ಡಾ[illegible] ಕಾಮತ್; (4) ಎ.

7—[illegible]

(5) ಖಾನ್‌ಸಾಹೆ[illegible] ಮೊಹಿಉದ್ದೀನ್ ಮೊಹ್ಮದ್

6—0—0

(4) ರಾವ್‌ಬಹದೂರ್ ಕೆ. ಶ್ರೀ ರಾವ್.

6—0—0

(4) ಕೆ. ಎಸ್. ಭಟ್.

5—0—0

(5) ಕೆ. ಕೃಷ್ಣಯ್ಯ; (5) ಡಾ. [illegible] ಪೋತನ್;(5)ಕೆ. ಅಚ್ಯುತನ್ ನಾ[illegible]

ಕಿರುಮಾಸ್ತೆಗೆ ಉನ್ನತಿ ಪದವಿ ಲಭಿಸಿತು


ಧನಿಯು ನಿನ್ನನ್ನು ಕರೆಯುತ್ತಾರೆ ಆ ಜಮಾ ಖರ್ಚುಗಳಲ್ಲಿ ನೀನು ಮಾಡಿರುವ ತಪ್ಪುಗಳಿಗಾಗಿ ನಿನ್ನ ಮೇಲೆ ಬಹಳ ಕೋಪಗೊಂಡಿದ್ದಾರೆ
ನಾನೇನು ಮಾತಾಡಲಿ. ಈ ಡಿವಾರ್ಟ್‌ಮೆಂಟಿನಲ್ಲಿ ಕೆಲಸ ಬಹಳ ಹೆಚ್ಚಾಗಿದೆ. ಆದೂ ಅಲ್ಲದೆ ನಾನು ಎಷ್ಟು ಬಳಲಿ ಬೇಸತ್ತಿದ್ದೇನೆಂಬುದು ನಿನಗೆ ತಿಳಿದೇ ಇದೆ
ನಾನು ಬಹಳ ವಿಷಾದಿಸುತ್ತೇನೆ, ಸಾರ್. ಈಚೆಗೆ ಏಕಾಗ್ರಚಿತ್ತದಿಂದ ಕೆಲಸಮಾಡಲು ನನಗೆ ಅಸಾಧ್ಯವಾಗಿದೆ. ಯಾವಾಗಲೂ ಬಳಲಿ ಬೆಂಡಾಗಿರುತ್ತೇನೆ
ಇಂಥ ತಪ್ಪುಗಳನ್ನು ನೀನು ಇದುವರೆಗೆ ಎಷ್ಟು ಮಾಡಿರುವೆ! ಈ ಬಾರಿಯೂ ನಿನ್ನನ್ನು ಮನ್ನಿಸಿರುವೆನು. ಆದರೆ ನೀನು ಜಾಗರೂಕತೆಯಿಂದ ಕೆಲಸ ಮಾಡಬೇಕು. ನಿನಗೆ ನೆತ್ತಿ ಹುಷಾರಿಲ್ಲದಿದ್ದರೆ ಡಾಕ್ಟರನ್ನು ಹೋಗಿ ನೋಡು
ಡಾಕ್ಟರ ರವರ
ನಾನು ನಿದ್ದೆಯಿಂದೇಳುವಾಗಲೇ ಬಳಲಿರುತ್ತೇನೆ. ಯಾವ ಕೆಲಸವನ್ನೂ ಮಾಡಲು ನನ್ನಿಂದಾಗುವುದಿಲ್ಲ
ಓಹೊ! ಏಳುವಾಗಲೇ ಬಳಲಿರುತ್ತೀರೊ? ದಿನವೆಲ್ಲಾ ನಿತ್ರಾಣವಾಗಿರುತ್ತದೆಯೊ? ಪ್ರಾತಃಕಾಲ ದೌರ್ಬಲ್ಯವೆಂದು ತೋರುತ್ತದೆ. ನೀವು ಹಗಲಿನಲ್ಲಿ ವ್ಯಯಮಾಡುವ ಚೈತನ್ಯವನ್ನು ರಾತ್ರಿ ನಿದ್ರಿಸುವಾಗ ಪುನಃಸಂಗ್ರಹಿಸುವುದಿಲ್ಲ. ಮಲಗುವಾಗ ಹಾರ್ಲಿಕ್ಸ್ ತೆಗೆದುಕೊಳ್ಳಿ. ಅನೇಕ ವ್ಯಾಧಿಪೀಡಿತರ ಅನುಭವದಂತೆ ಅದು ರಾತ್ರಿ ನಿದ್ರಿಸುವಾಗ ಶಕ್ತಿಯನ್ನೂ ಚೈತನ್ಯವನ್ನೂ ಪುನರ್ರಚಿಸುತ್ತದೆ
ಪ್ರತಿರಾತ್ರಿಯೂ ಅದೇ ರೀತಿಯಲ್ಲಿ
ಈ ಹಾರ್ಲಿಕ್ಸ್ ನನ್ನನ್ನು ಹೊಸ ಮನುಷ್ಯನನ್ನಾಗಿ ಮಾಡುತ್ತಿದೆ
ಆನಂತರ
ಧನಿಯು ನನ್ನನ್ನು ಮುಂದಿನ ತಿಂಗಳು ಹೆಡ್ ಆಫೀಸಿಗೆ ಕಳುಹಿಸುತ್ತಾರಂತೆ! ಆಹಾ! ಎಂಥಾ ಪದವಿ!
ಆದೃಷ್ಟ ಶಾಲಿಯಯ್ಯಾ ನೀನು
ಆ ಉನ್ನತ ಪದವಿಗೆ ನೀನು ಆರ್ಹನೇ ಸರಿಯಯ್ಯಾ!
(ಯೋಚಿಸುತ್ತಾನೆ) ಎಲ್ಲಾ ಹಾರ್ಲಿಕ್ಸ್‌ನ ಪ್ರಭಾವವಲ್ಲದೇ ಮತ್ತೇನು
ಹಾರ್ಲಿಕ್ಸ್‌ನ ಶೇಕಡ ನೂರರಷ್ಟು ಪುಷ್ಟಿಕರವಾಗಿರುವುದರಿಂದ ಅಲಸಿಕೆಯನ್ನು ನಿವಾರ್ಜಿತವಾಗಿ ಮೂರ್ವಡಿಸುತ್ತದೆ. ಅಸ್ವಸ್ಥರಾಗಿರುವಾಗ ನೀವು ದಿನವಹಿ ಸೇವಿಸುವ ಆಹಾರವು ನಿಮಗೆ ಹಿಡಿಯದಿದ್ದರೂ ನಿಮ್ಮ ಶರೀರಕ್ಕೆ ಪೋಷಣೆಯು ಅತ್ಯಾವಶ್ಯಕವನ್ನು ತುದನ್ನು ಪುರೈಯದೇ. ಹಾರ್ಲಿಕ್ಸ್ ರೋಗಾವಸ್ಥೆಯಲ್ಲಿ ನಿಮ್ಮ ಶಕ್ತಿಯು ಕುಂದದಿರುವುದಕ್ಕೂ, ರೋಗ ಗುಣಮುಖಕ್ಕೆ ಬರುವಾಗ ನೀವು ಜಾಗ್ರತೆ ಗುಣ ಹೊಂದುವುದಕ್ಕೂ ಸಹಾಯಕರವಾಗಿರುವುದು; ಕ್ಷಯಿಸಿದ ನಿಮ್ಮ ನರದ ಪರಿಗಳನ್ನು ಪುನರ್ರಚಿಸುವುದು; ನೆದು ಮತ್ತು ನಿಮಗೆ ನವಶಕ್ತಿಯನ್ನೂ ಚೈತನ್ಯವನ್ನೂ ಉಂಟುಮಾಡುವುದು
HORLICKS
Horlicks Mixer
H. 1654

ನೀವು ಅಸ್ವಸ್ಥರಾಗಿರುವಾಗಲೂ, ಗುಣಹೊಂದುತ್ತಿರುವಾಗಲೂ ಅತ್ಯಾ ಅಯಾಸದಿಂದ ಬಳಲಿ ಬೆಂಡಾಗಿದ್ದರೂ

ಹಾರ್ಲಿಕ್ಸ್ ಸೇವಿಸಿರಿ

ಅದು ನಿಮ್ಮನ್ನು "ಪ್ರಾತಃಕಾಲದ ದೌರ್ಬಲ್ಯ"ದಿಂದ ಕಾಪಾಡುತ್ತದೆ. ನೀವು ಚೆನ್ನಾಗಿ ನಿದ್ರಿಸುವಿರಿ. ನಿದ್ರೆಯಿಂದ ಉತ್ಸಾಹದಿಂದೇಳುವಿರಿ ಮತ್ತು ನಿಮ್ಮ ಚೈತನ್ಯವು ಪುನರ್ರಚಿತವಾಗುವುದು

ಇಂಡಿಯದ ರಾಜಕೀಯವಾದ ಕಗ್ಗಂಟಿನ ತೀರ್ಮಾನ

"ಇಂಡಿಯದ ಕುರಿತಾಗಿ ಸರಕಾರವು ಇನ್ನೂ ತನ್ನ ಕೊನೆಯ ಸೂಚನೆಗಳನ್ನು ಪೂರೈಸಿಯೂ ಇಲ್ಲ; ಬ್ರಿಟಿಶ್ ಪ್ರಧಾನರು ತಾವು "ಹೌಸ್ ಆಫ್ ಕಾಮನ್ಸ್" [illegible] ಷ್ಟಡುವೆವೆಂದು ತಿಳಿಸಿದ್ದ ಆ ಪ್ರಕ[illegible]ವ ತಾರೀಕಿಗೆಂದು ನಿರ್ಣಯ [illegible]ಲ್ಲ"—ಹೀಗೆಂದು ಲಂಡನ್ [illegible]ಯಕರೊಬ್ಬರ ವರದಿ. ಭಾರ[illegible]ಯ ಕೇಳಿಕೆಗಳ ವಿಚಾರ[illegible]ಮಂತ್ರಿಮಂಡಲವು ಧಾರಾ[illegible]ಯಾಯಿತಿಗಳನ್ನು ಕೊಡಲು [illegible]ಡಿಯದ ಜನರಿಗೆ [illegible]ಯಾವ ಒಂದು [illegible]ರ್ಪಡಿಸಲೇ ಕೂಡ [illegible]ವು ಪ್ರಮುಖರ ಅಭಿ[illegible]ಆದೇ ವಾರ್ತಾದಾಯಕರ

[illegible]ರತದ ರಾಜಕೀಯವಾದ ಕಗ್ಗಂ[illegible]ಈಗ ಈ ಸ್ವರೂಪವನ್ನು ತಳೆ[illegible]ಹುದು. ಚುನಾಯಿತರಾದ [illegible]ಸಭಾ ಪ್ರತಿನಿಧಿಗಳಿಗೆ—[illegible]ಕವಾಗಿ ರಕ್ಷಣೆ ಮತ್ತು ಅರ್ಥ[illegible]ಮಂತ್ರಿವರ್ಗಕ್ಕೆ—ಜವಾಬು[illegible]ದ, ಒಂದು ಭಾರತ ರಾಷ್ಟ್ರೀಯ [illegible]ಗೆ, ಕೂಡಲೇ ನಿರ್ದಿಷ್ಟವಾದ [illegible]ಕಾರವನ್ನು ವರ್ಗಾಯಿಸದ ಎನಾ, ಭಾರತದ ರಾಷ್ಟ್ರೀಯ ಮಹಾಸಭೆ ಕೇವಲ 'ಡೊಮಿನಿಯನ್ ಸ್ಟೇಟಸಿನ' ವಾಗ್ದಾನದಿಂದಲೇ ತೃಪ್ತವಾಗದು; ಅದನ್ನು ಸ್ವೀಕರಿಸದು.

ಇದನ್ನು ಒಪ್ಪದ ಸರಕಾರದ ಅಧಿ[illegible]ಗಳು ಕೆಲವರು, ಈ ಬಗೆಯ ವೃದ್ಧಿ ಸೂಚಕವಾದ ಸೂಚನೆಗಳನ್ನು ಸ್ವೀಕರಿಸುವ ಮುನ್ನ, ಈ ರಿಯಾಯಿತಿಗಳು ಮುಂದೆ ಸಂಪೂರ್ಣ ಸ್ವಾತಂತ್ರ್ಯದ ಕೇಳಿಕೆಗಳಿಗೆ ಅವಕಾಶ ಕೊಡದ ಹಾಗೆ, ತಕ್ಕ ಗ್ಯಾರೇಂಟಿ ಪಡೆಯಬೇಕು ಎಂಬ ಅಭಿಪ್ರಾಯವುಳ್ಳವರಾಗಿದ್ದಾರೆ.

ಭಾರತದ ಈ ಕಗ್ಗಂಟನ್ನು ಬಿಡಿಸಿ ಎಂಬ ಕುರಿತು, ಪಾರ್ಲಿಮೆಂಟಿನಲ್ಲಿ ಕೇಳಿಕೆಗಳು ಹೆಚ್ಚುತ್ತಿವೆ. ಯಾವುದೊಂದಕ್ಕೂ ನಿವೃತ್ತಿಯನ್ನು ಕಲ್ಪಿಸುವುದಕ್ಕೂ ಪೂರ್ವದಲ್ಲಿ, ಭಾರತೀಯರಿಗೆ ಸ್ವಾತಂತ್ರ್ಯದ ವಿಷಯದಲ್ಲಿ ಇರುವ ಹಕ್ಕನ್ನು ಮನ್ನಿಸಬೇಕಾದುದು ಅಗತ್ಯವೆಂದು ಲೇಬರ್ ಪಂಗಡದ ಒಂದು ಸಬ್ ಕಮಿಟಿ ವರದಿಮಾಡಿದೆ. ಇದೇ ಅಭಿಪ್ರಾಯವನ್ನು ಆ ಪಂಗಡದ ಕಾರ್ಯಕಾರೀ ಸಮಿತಿಯೂ ಒಪ್ಪಿದೆ. ಕಾಮನ್ಸ್ ಮಂದಿರದಲ್ಲಿ ಚರ್ಚೆ ನಡೆಯುವಾಗ ಈ ಅಭಿಮತವು ಮುಂದೆ ಬರುವುದು.

ನೋಟೀಸು

ತೋಕೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

R. E. P. No. 810/1941.

ಗೋವಿಂದ ಭಟ್ಟ—**ಅರ್ಜಿದಾರ.**

ಮತ್ತು

ವೆಂಕಟ್ರಾವ್ ಕೂಡಾ

—**ರೆಸ್ಪೊಂಡೆಂಟರು.**

2ನೇ ರೆಸ್ಪೊಂಡೆಂಟನಾದ ತೋಕೂರು ಗ್ರಾಮದಲ್ಲಿರುವ ರಾಮಚಂದ್ರಯ್ಯನವರ ಮಗ ಶ್ರೀನಿವಾಸ ರಾಯರಿಗೆ—3ನೇ ರೆಸ್ಪೊಂಡೆಂಟ ಕ್ಯೂಕುಡೆ ಗ್ರಾಮದಲ್ಲಿರುವ ಬಾಳ ನರಸಪ್ಪಯ್ಯನವರ ಮಗ, ಶ್ರೀನಿವಾಸ ರಾಯರಿಗೆ.

ಅರ್ಜಿದಾರನು ರೆಸ್ಪೊಂಡೆಂಟರ ಬಾಬ್ತು ಡಿಕ್ರಿಗೆ ಜವಾಬ್ದಾರಿಯಿರುವ ಸ್ಥಿರಾಸ್ತಿ ಏಲಂ ಬಗ್ಗೆ ದಾಕ್ಲುಮಾಡಿದ ಏಲಂ ಇಸ್ತಿಹಾರು ಮಂಜೂರಾತಿಗೆ ತಾ. 21-3-1942ರಲ್ಲು ತನ್ನಿಗೆ ಇಟ್ಟಿದೆ. ಆ ಕುರಿತು ಏನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿನಸ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸುವರೆ ತಪ್ಪಿದ್ದಲ್ಲಿ ರೆಸ್ಪೊಂಡೆಂಟರ ತಿರ್ವಾ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯದೆ.

S. Venkat Rao,
Advocate for Petitioner.
Mangalore, 9-3-1942.

ನನ್ನ ಮತ್ತು ನಿಮ್ಮ ಸುರಕ್ಷಿತೆಗಾಗಿ
ಒಂದು ವ್ಯವಹಾರ ವಿವೇಕಪೂರ್ಣ ಯೋಜನೆ
ಯುದ್ಧವು ದಿನದಿನಕ್ಕೆ ನಿಮಗೆ ಪ್ರಿಯರಾದ ವ್ಯಕ್ತಿಗಳ ಹತ್ತಿರಕ್ಕೆ ಬರುತ್ತಿದೆ
ತಿದ್ದರಿಂದ ಅವರ ಜೀವವನ್ನೂ, ನಿಮ್ಮ ಜೀವ ಆಸ್ತಿಪಾಸ್ತಿ, ಭವಿಷ್ಯದ ಹಿತಗ
ಳನ್ನೂ ರಕ್ಷಿಸಿಕೊಳ್ಳಲು ನೀವು ಈಕ್ಷಣವೇ ನಿಮ್ಮ ಕೈಲಾದ ಕಾರ್ಯಕ್ರಮಗಳನ್ನೆಲ್ಲಾ
ಕೈಗೊಳ್ಳ ಬೇಕಾದುದು ನ್ಯಾಯವೇ ಆಗಿದೆ. ಇಂಡಿಯಾವು ಪರಕೀಯರ ಧಾಳಿ
ಯನ್ನು ಇದಿರಿಸಲು ಸಮರ್ಥವಾಗುವುದಕ್ಕೆ ನೀವು ಸಹಾಯಮಾಡಲು ಸಾಧ್ಯ
ವಿದೆ ನೀವು ಯಾವುದನ್ನು ಬೆಲೆಯುಳ್ಳದ್ದೆಂದು ಭಾವಿಸುವಿರೋ ಅದನ್ನು
ರಕ್ಷಿಸುವುದಕ್ಕೆ ಸಹಾಯ ಮಾಡುವುದು ನಿಮ್ಮಿಂದ ಸಾಧ್ಯ.
ಆದರೆ ಕಾಲ ಕಳೆಯುವಂತಿಲ್ಲ. ಈ ಕ್ಷಣವೇ ಕಾರ್ಯೋನ್ಮುಖರಾಗಿರಿ!
ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು
ಇದಕ್ಕಾಗಿ ನಾವು ವಿನಿಯೋಗಿಸುವ ಪ್ರತಿ
ಯೊಂದು ಆಣೆಯೂ ಇಂಡಿಯಾದ ಸೇನೆ
ನಾಕೆ, ವಿಮಾನದಳಗಳ ರಚನೆಗೆ ಸಹಾಯಕ
ವಾಗಿ ಪರಕೀಯರ ಆಕ್ರಮಣ ಧಾಳಿಯನ್ನು
ನಿರೋಧಿಸಲು ಇಂಡಿಯಾದ ಬಲವನ್ನು
ಹೆಚ್ಚಿಸುತ್ತದೆ.
ಪ್ರತಿ ೧೦ ರೂಪಾಯಿನ
ಡಿಫೆನ್ಸ್ ಸೇವಿಂಗ್ಸ್
ಸರ್ಟಿಫಿಕೇಟ್
ರೂ ೬-೯-೦ ಲಾಭ ಕೊಡುತ್ತಿ
ಹೆಚ್ಚಿನ ವಿವರಗಳು ಪೋಸ್ಟ್
ಆಫೀಸಿನಲ್ಲಿ ದೊರೆಯುತ್ತಿ.
GI-69-KN

Prefer the "POPULAR"
for your Life Assurance

In patronising and co-operating with this Company, you promote the success of an institution of YOUR OWN District.

THE POPULAR INSURANCE CO., LTD.,
Head Office: **MANGALORE, S. INDIA.**

Edited and Published by B. Vittal Rau at the Kanteerava Office, Maidan North Road, Mangalore
Printed by M. Baburaya Prabhu, B. A., at the Mangalore Press, Car Street, Mangalore.